ಅ) ಪುತ್ತೂರು ಎಪಿಎಂಸಿ ವ್ಯಾಪ್ತಿಯಲ್ಲಿ ವರ್ತಕರು ತಾವು ಖರೀದಿಸಿದ ಕೃಷಿ ಹುಟ್ಟುವಳಿಗಳಿಗೆ ಶುಲ್ಕ ಪಾವತಿಸುತ್ತಿದ್ದರೂ, ಅವುಗಳನ್ನು ಎಪಿಎಂಸಿ ವ್ಯಾಪ್ತಿಯಿಂದ ಹೊರಗೆ ಮಾರಾಟಕ್ಕೆ ಕಳುಹಿಸುವ ಸಂದರ್ಭದಲ್ಲಿ ಇಲಾಖೆಯಿಂದ ನೀಡುವ ಸಾಗಾಟ ಪರ್ಮಿಟು ನೀಡದೇ ಇರಲು ಕಾರಣವೇನು;

ಆ) ಪುತ್ತೂರು ನಗರದಲ್ಲಿ ಕೃಷಿ ಹುಟ್ಟುವಳಿ ಖರೀದಿಸುತ್ತಿರುವ ವರ್ತಕರಿಗೆ ಮಾತ್ರ ಸಾಗಾಟ ಪರ್ಮಿಟು ನೀಡದೇ ಕಾರ್ಯದರ್ಶಿಯವರಿಗೆ ಎಪಿಎಂಸಿ ಅಧ್ಯಕ್ಷರು ಸೂಚಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹೀಗೆ ವರ್ತಕರಿಗೆ ಕಿರುಕುಳ ಕೊಡುವ ಬಗ್ಗೆ ಎಪಿಎಂಸಿ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು;

ಈ) ಹೀಗೆ ಕೆಲವು ವರ್ತಕರಿಗೆ ಸಾಗಾಟ ಪರ್ಮಿಟು ನೀಡಿ, ಕೆಲವು ವರ್ತರಿಗೆ ಸಾಗಾಟ ಪರ್ಮಿಟು ನೀಡದೇ ಇರಲು ಕಾರಣವೇನು; ಈ ತಾರತಮ್ಯ ಮಾಡುವ ಎಪಿಎಂಸಿ ಕಾರ್ಯದರ್ಶಿ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎಸ್.ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಮಾರುಕಟ್ಟೆ ಕಾಯ್ದೆಯಲ್ಲಿ ಅಧಿಸೂಚಿತ ಹುಟ್ಟುವಳಿಗಳ ಖರೀದಿ ಹಾಗೂ ಮಾರಾಟವನ್ನು ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವಂತೆ ಕಡ್ಡಾಯಗೊಳಿಸಲಾಗಿದೆ. ಪುತ್ತೂರು ಸಮಿತಿಯು ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಿದ್ದು, ವ್ಯಾಪಾರ ವಹಿವಾಟನ್ನು ಪ್ರಾಂಗಣಕ್ಕೆ ಸ್ಥಳಾಂತರಿಸುವ ಸಂಬಂಧ ಕ್ರಮ ಕೈಗೊಂಡಿದ್ದು, ಇದರ ವಿರುದ್ಧ ವರ್ತಕರು ಸಲ್ಲಿಸಿದ್ದ ಮನವಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿ, ಪ್ರಾಂಗಣಕ್ಕೆ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸಬೇಕೆಂದು ತೀರ್ಪು ನೀಡಿರುತ್ತದೆ.

ಪ್ರಾಂಗಣದ ಹೊರಗೆ ವ್ಯಾಪಾರ ಚಟುವಟಿಕೆಗಳನ್ನು ನಿರ್ಬಂದಿಸಿ ಪ್ರಾಂಗಣದಲ್ಲಿಯೇ ವಹಿವಾಟು ನಡೆಸಲು ವರ್ತಕರಿಗೆ ತಿಳುವಳಿಕೆ ನೀಡಲಾಗಿದೆ. ಇದನ್ನು ಉಲ್ಲಂಘಿಸಿ, ವಹಿವಾಟು ನಡೆಸುವ ವರ್ತಕರಿಗೆ ಸಾಗಾಣಿಕೆ ಪರ್ಮಿಟ್ ನೀಡದಿರಲು ತೀರ್ಮಾನ ಕೈಗೊಂಡಿದ್ದು ಈ ತೀರ್ಮಾನವು ಕಾನೂನಿನ್ವಯ ಕೈಗೊಂಡ ಕ್ರಮವಾಗಿರುತ್ತದೆ.-

ಆ) ಬಂದಿದೆ

ಇ) ಪುತ್ತೂರು ನಗರದಲ್ಲಿನ ಅಭಿವೃದ್ಧಿಪಡಿಸಿದ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರದ ಹಿನ್ನೆಲೆಯಲ್ಲಿ ಪ್ರಾಂಗಣದ ಹೊರಗೆ ವ್ಯವಹರಿಸುವ ವರ್ತಕರಿಗೆ ಸಾಗಾಣಿಕೆ ಪರ್ಮಿಟ್ ನೀಡದೆ ಇರಲು ಸಮಿತಿಯು ಕೈಗೊಂಡ ತೀರ್ಮಾನವು ಕಾನೂನಿನ್ವಯ ಕೈಗೊಂಡ ಕ್ರಮವಾಗಿದ್ದು, ಇದರಲ್ಲಿ ಕಿರುಕುಳದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲಿನಂತೆ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಪಡಿತರ ಚೀಟಿಗಳು

631 (5431) : ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿತರಿಸಲಾಗುವ ಪಡಿತರ ಚೀಟಿಯಲ್ಲಿ ಎಷ್ಟು ವಿದಗಳಿವೆ ಮತ್ತು ಅವುಗಳಲ್ಲಿರುವ ಸವಲತ್ತುಗಳು ಮತ್ತು ಪಡಿತರ ಬೆಲೆ ಎಷ್ಟು

ಆ) ಉಡುಪಿ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಪಡಿತರ ಚೀಟಿಗಳಿವೆ; ಮತ್ತು ಯಾವ ಯಾವ ವಿಧಗಳಿವೆ (ತಾಲ್ಲೂಕುವಾರು ವಿವರ ಒದಗಿಸುವುದು);

ಇ) ಪಡಿತರ ಅಂಗಡಿಗಳಲ್ಲಿ ಅವ್ಯವಹಾರಗಳಾದರೆ ಅವುಗಳನ್ನು ಬದಲಾಯಿಸುವಾಗ ಯಾರಿಗೆ ಆದ್ಯತೆ ನೀಡಲಾಗುವುದು;

ಈ) ಜನಪ್ರತಿನಿಧಿಗಳು ಪಡಿತರ ಅಂಗಡಿ ಹೊಂದಬಹುದೆ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಆರು ವಿಧದ ಪಡಿತರ ಚೀಟಿಗಳಿವೆ.

1. ಹಸಿರು ಪಡಿತರ ಚೀಟಿ
2. ಅಂತ್ಯೋದಯ ಅನ್ನ ಪಡಿತರ ಚೀಟಿ
3. ಹಳದಿ ಪಡಿತರ ಚೀಟಿ
4. ಕೇಸರಿ ಪಡಿತರ ಚೀಟಿ
5. ಫೋಟೋ ಪಡಿತರ ಚೀಟಿ
6. ಗೌರವಾನ್ವಿತ ಪಡಿತರ ಚೀಟಿ

ಗೌರವಾನ್ವಿತ ಪಡಿತರ ಚೀಟಿಗಳನ್ನು ಹೊರತು ಪಡಿಸಿ ಉಳಿದೆಲ್ಲಾ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ಪದ್ದತಿಯಡಿ ನಿಗದಿತ ಪ್ರಮಾಣದ ಅಹಾರ ಧಾನ್ಯಗಳನ್ನು ಒದಗಿಸಲಾಗುತ್ತಿದೆ. ಮಾಹೆಯಾನ ವಿತರಿಸಲಾಗುತ್ತಿರುವ ಆಹಾರಧಾನ್ಯಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಉಡುಪಿ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ವಿತರಿಸಲಾಗಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ಹಸಿರು	ಹಳದಿ	ಅಂ. ಅನ್ನ	ಕೇಸರಿ	ಫೋಟೋ	ಒಟ್ಟು
1	ಉಡುಪಿ	21699	–	3100	39092	33922	97813
2	ಕುಂದಾಪುರ	37110	–	3163	23111	4592	67976.
3	ಕಾರ್ಕಳ	11921	–	2338	18556	4391	37206
	ಒಟ್ಟು	70730	–	8601	80759	42905	202995

ಇ) ಪಡಿತರ ಅಂಗಡಿಗಳಲ್ಲಿ ಅವ್ಯವಹಾರಗಳು ಕಂಡು ಬಂದಲ್ಲಿ ಅಂತಹ ಅಂಗಡಿಗಳನ್ನು ಅಮಾನತ್ತು ಪಡಿಸಿದಾಗ ಪರ್ಯಾಯವಾಗಿ ಸಮಿಪದ ನ್ಯಾಯ ಬೆಲೆ ಅಂಗಡಿಯ ಮೂಲಕ ವಿತರಣೆಗೆ ವ್ಯವಸ್ಥೆ ಮಾಡಲಾಗುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸಮೀಪದ ನ್ಯಾಯಬೆಲೆ ಅಂಗಡಿಯ ಮೂಲಕ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ ವಿನಃ ಇದರಲ್ಲಿ ಆದ್ಯತೆ ಇರುವುದಿಲ್ಲ. ರದ್ದು ಪಡಿಸಿದ ಸಂದರ್ಭದಲ್ಲಿ ಮರು ಪ್ರಕಟಣೆ ನೀಡಲಾಗುವುದು ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣಾ) ಆದೇಶ 1992ರಲ್ಲಿ ನಿಗದಿ ಪಡಿಸಿರುವ ಆದ್ಯತೆಯನ್ನು ಅನುಸರಿಸಿ ಮಂಜೂರು ಮಾಡಲಾಗುವುದು.

ಈ) ಹೊಂದಬಹುದು

ವಿತರಿಸಲಾಗುತ್ತಿರುವ ಪಡಿತರ ವಸ್ತುಗಳು (ಪ್ರಮಾಣ)	ಹಸಿರು ಪಡಿತರ ಚೀಟಿ		ಹಳದಿ ಪಡಿತರ ಚೀಟಿ		ಅಂತ್ಯೋದಯ ಅನ್ನ ಪಡಿತರ ಚೀಟಿ		ಕೇಸರಿ ಪಡಿತರ ಚೀಟಿ		ಫೋಟೋ ಪಡಿತರ ಚೀಟಿ		ಗೌರವ ನ್ವಿತ ಪಡಿತರ ಚೀಟಿ
	ಪ್ರಮಾಣ ಕೆ.ಜಿ. ಗಳಲ್ಲಿ	ದರ ರೂ. ಗಳಲ್ಲಿ	ಪ್ರಮಾಣ ಕೆ.ಜಿ. ಗಳಲ್ಲಿ	ದರ ರೂ. ಗಳಲ್ಲಿ	ಪ್ರಮಾಣ ಕೆ.ಜಿ. ಗಳಲ್ಲಿ	ದರ ರೂ. ಗಳಲ್ಲಿ	ಪ್ರಮಾಣ ಕೆ.ಜಿ. ಗಳಲ್ಲಿ	ದರ ರೂ. ಗಳಲ್ಲಿ	ಪ್ರಮಾಣ ಕೆ.ಜಿ. ಗಳಲ್ಲಿ	ದರ ರೂ. ಗಳಲ್ಲಿ	
ಅಕ್ಕಿ	28	6.15	8 20	3.50 6.15	28	3.00	28	9.00	28	9.00	–
ಗೋಧಿ	7	4.65	2 5	2.75 4.65	7	2.00	7	6.70	7	6.70	–
ಸಕ್ಕರೆ (ಪಟ್ಟಣ)	3	13.50	3	13.50	3	13.50	–	–	–	–	–
(ಗ್ರಾ)	2	13.50	2	13.50	2	13.50	–	–	–	–	–
ಸೀಮೆಎಣ್ಣೆ (ಅ.ಪ)	10 ಲೀ	9.30 ರಿಂದ 10.00	10 ಲೀ	9.30 ರಿಂದ 10.00	10 ಲೀ	9.30 ರಿಂದ 10.00			10 ಲೀ	9.30 ರಿಂದ 10.00	–
(ನಗರ/ ಪಟ್ಟಣ)	8 ಲೀ	9.30 ರಿಂದ 10.00	8 ಲೀ	9.30 ರಿಂದ 10.00	8 ಲೀ	9.30 ರಿಂದ 10.00	8 ಲೀ	9.30 ರಿಂದ 10.00	–	–	–
(ಗ್ರಾ)	4 ರಿಂದ 5 ಲೀ	9.30 ರಿಂದ 10.00	4 ರಿಂದ 5 ಲೀ	9.30 ರಿಂದ 10.00	4 ರಿಂದ 5 ಲೀ	9.30 ರಿಂದ 10.00	4 ರಿಂದ 5 ಲೀ	9.30 ರಿಂದ 10.00	–	–	–